**ಸಾಕ್ಷಿಯನ್ನು ದಿಃ06.06.2019 ರಂದು ಕರೆಸಿ ಪ್ರಮಾಣ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಎನ್.ಎನ್ ವಕೀಲರಿಂದಃ**

ನಿಪಿ-11 ವಂಶವೃಕ್ಷದ ಪ್ರಮಾಣಪತ್ರದ ಪ್ರಕಾರ ಮೂಲವಂಶಸ್ಥರಾದ ರಾಮಜುಟ್ಟನ ತಂದೆಯ ಹೆಸರು ಮುನಿರಾಮಪ್ಪ ಎಂದರೆ ಸರಿ. ನಿಪಿ-11 ವಂಶವೃಕ್ಷದ ಜೊತೆ ಲಗತ್ತಿಸಿರುವ ವಂಶವೃಕ್ಷದ ಪ್ರಮಾಣಪತ್ರದ ಪ್ರಕಾರ ರಾಮಜುಟ್ಟರವರ ಮಗ ವೆಂಕಟಪ್ಪ ಎಂದರೆ ಸರಿ. ಸದರಿ ವೆಂಕಟಪ್ಪನ ಹೆಂಡತಿ ರಾಮಕ್ಕ ಎಂದರೆ ಸರಿ. ಆಕೆ ಈಗಲು ಬದುಕಿದ್ದಾರೆ ಎಂದರೆ ಸರಿ. ಆಕೆಯನ್ನು ದಾವೆಯಲ್ಲಿ ಪಕ್ಷಗಾರಳನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ವೆಂಕಟಪ್ಪ ಮತ್ತು ರಾಮಕ್ಕನಿಗೆ 5 ಜನ ಮಕ್ಕಳು ಎಂದರೆ ಸರಿ. ಅವರುಗಳಲ್ಲಿ ವೆಂಕಟರಾಮಪ್ಪ ಹಿರಿಯ ಮಗ ಇರುತ್ತಾನೆ ಎಂದರೆ ಸರಿ. ಸದರಿ ವಂಶವೃಕ್ಷ ನಿಪಿ-11ರಲ್ಲಿ ವೆಂಕಟರಾಮಪ್ಪ ಫವತಿ ಎಂದು ಕಾಣಿಸಿರುತ್ತದೆ ಎಂದರೆ ಸರಿ. ಸದರಿ ವೆಂಕಟರಾಮಪ್ಪ ಈಗ ಬದುಕಿರುತ್ತಾರೆ ಎಂದರೆ ಸರಿ. ಸದರಿ ವೆಂಕಟರಾಮಪ್ಪನಿಗೆ ಲಕ್ಷ್ಮಮ್ಮ ಹೆಂಡತಿ ಹಾಗೂ ನಾಗೇಶ ಎಂಬ ಮಗ ಇರುತ್ತಾರೆ ಎಂದರೆ ಸರಿ. ಹಾಗೆಯೇ ವೆಂಕಟಪ್ಪನ 2ನೇ ಮಗ ವೆಂಕಟೇಶ ಎಂದರೆ ಸರಿ. ಸದರಿ ವೆಂಕಟೇಶನು ಮರಣ ಹೊಂದಿ ಈಗ ಆತನ ಉತ್ತರಾಧಿಕಾರಿಯಾಗಿ ಆತನ ಹೆಂಡತಿ ನಾರಾಯಣಮ್ಮ ಮತ್ತು ಮಗ ರಾಮಮೂರ್ತಿ ಬದುಕಿರುತ್ತಾರೆ ಎಂದರೆ ಸರಿ. ಈ ದಾವೆಯಲ್ಲಿ ಸದರಿ ರಾಮಮೂರ್ತಿಯನ್ನು ಪಕ್ಷಕಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಸದರಿ ವೆಂಕಟಪ್ಪನ 3ನೇ ಮಗ ಶ್ರೀನಿವಾಸ, 4ನೇ ಮಗ ಸುರೇಶ ಹಾಗೂ 5ನೇ ಮಗ ಗೋಪಾಲ ಎಂದರೆ ಸರಿ.

ನಮ್ಮ ವಾದಪತ್ರದಲ್ಲಿ ವಾದಿಯರಿಗೆ ಹಾಗೂ ಸದರಿ ಮೇಲೇಳಿದ ವೆಂಕಟಪ್ಪನಿಗೆ ಯಾವ ಸಂಬಂಧ ಇರುತ್ತದೆಂದು ಹೇಳಿಲ್ಲ ಎಂದರೆ ಸರಿಯಲ್ಲ. ಈ ದಾವೆಯ ವಾದಪತ್ರದಲ್ಲಿ 1 ಮತ್ತು 3 ರಿಂದ 5ನೇ ವಾದಿಗಳು ವೆಂಕಟೇಶ ಎಂಬುವವರ ಮಕ್ಕಳೆಂದು ತೋರಿಸಲಾಗಿರುತ್ತದೆ ಎಂದರೆ ಸರಿ. ನಿಪಿ-11ರಲ್ಲಿ ಕಾಣಿಸಿದ ವಂಶವೃಕ್ಷಕ್ಕೂ ಮತ್ತು ವಾದಪತ್ರದಲ್ಲಿ ಕಾಣಿಸಿರುವ ವಂಶವೃಕ್ಷಕೂ ವ್ಯತ್ಯಾಸ ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸ್ವಲ್ಪ ತಪ್ಪು ಇದೆ ಎಂದು ನುಡಿಯುತ್ತಾರೆ. ಸದರಿ ತಪ್ಪನ್ನು ನಾನು ವಾದಪತ್ರದ ತಿದ್ದುಪಡಿಯ ಮೂಲಕ ಸರಿಪಡಿಸಿಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ಸದರಿ ವಿಷಯ ನನಗೆ ಈಗ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಈ ಮೊದಲನೇ

ನನ್ನ ಪಾಟೀ ಸವಾಲಿನಲ್ಲಿ ಈ ವಿಷಯವನ್ನು 9ನೇ ಪ್ರತಿವಾದಿಯ ಪರ ವಕೀಲರಾದ ನಾನು ಪಾಟೀ ಸವಾಲಿನಲ್ಲಿ ಕೇಳಿರುತ್ತೇನೆ ಎಂದರೆ ಸರಿಯಲ್ಲ.

ಈರಪ್ಪ ಮತ್ತು ಆತನ ಮಕ್ಕಳು ದಾವಾ ಆಸ್ತಿಯನ್ನು 9ನೇ ಪ್ರತಿವಾದಿಯ ತಂದೆಗೆ ಮಾರಾಟ ಮಾಡಿರುತ್ತಾರೆಂದು ಅವರ ತಕರಾರಿನಲ್ಲಿ ಹೇಳಿರುತ್ತಾರೆ ಎಂದರೆ ಸರಿ. ಸದರಿ ವೀರಪ್ಪ ಮತ್ತು ಅವರ ಮಕ್ಕಳನ್ನು ನಿಪಿ-11ರಲ್ಲಿ ಕಾಣಿಸಿರುವುದಿಲ್ಲ ಎಂದರೆ ಸಾಕ್ಷಿಯು ಅವರುಗಳನ್ನು ಬಿಟ್ಟು ಮಿಕ್ಕ ಎಲ್ಲರನ್ನೂ ಕಾಣಿಸಿರುತ್ತೇವೆ ಎಂದು ನುಡಿಯುತ್ತಾರೆ.

ನಿಪಿ-11ರ ಪ್ರಕಾರ ಈರಪ್ಪನ 1ನೇ ಮಗ ರಾಮಯ್ಯ ಎಂದರೆ ಸರಿ. ಸದರಿ ರಾಮಯ್ಯನಿಗೆ ಎರಡು ಜನ ಮಕ್ಕಳು ಎಂದರೆ ಸರಿ. ಅವರುಗಳೆಂದರೆ ಮುನಿವೆಂಕಟಪ್ಪ ಮತ್ತು ವೆಂಕಟರಾಮಪ್ಪ ಎಂದರೆ ಸರಿ. ರಾಮಯ್ಯನ 2ನೇ ಮಗ ವೆಂಕಟರಾಮಪ್ಪನಿದ್ದು ಆತನ ಹೆಂಡತಿ ಶಾಂತಮ್ಮ ಈಗ ಜೀವಂತವಿರುತ್ತಾಳೆ ಎಂದರೆ ಸರಿ. ಸದರಿ ಶಾಂತಮ್ಮನನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ.

ಮೂಲ ವಾದಪತ್ರ ತಿದ್ದುಪಡಿಯಾದ ನಂತರವೂ ಸಹ ಪ್ರತಿವಾದಿ 12 ರಿಂದ 15ರವರ ಜೊತೆಯಲ್ಲಿ ಈರಪ್ಪನಿಗೆ ಏನು ಸಂಬಂಧ ಎಂದು ಹೇಳಿಲ್ಲ ಎಂದರೆ ಸರಿ. ಈರಪ್ಪನ ಮಕ್ಕಳು 9ನೇ ಪ್ರತಿವಾದಿಗೆ ಮಾರಾಟ ಮಾಡಿದ ಕ್ರಯಪತ್ರ ನಮಗೆ ಅನ್ವಯಿಸುವುದಿಲ್ಲವೆಂದು ಯಾವುದೇ ಪ್ರಾರ್ಥನೆಯನ್ನು ದಾವೆಯಲ್ಲಿ ಕೇಳಿಲ್ಲ ಎಂದರೆ ಸರಿ.

ನಿಪಿ-11ನ್ನು ತಯಾರಿಸಲು ನನ್ನ ಅಣ್ಣ ವೆಂಕಟರಾಮಪ್ಪ ಸಂಬಂಧಪಟ್ಟ ಅಧಿಕಾರಿಯವರಿಗೆ ಮಾಹಿತಿಯನ್ನು ನೀಡಿರುತ್ತಾರೆ. ನಾವುಗಳು ಕೊಟ್ಟ ಮಾಹಿತಿಯನ್ನಾಧರಿಸಿ ಸಂಬಂಧಪಟ್ಟ ಪ್ರಾಧಿಕಾರದವರು ವಂಶವೃಕ್ಷವನ್ನು ಕೊಡುತ್ತಾರೆ ಎಂದರೆ ಸರಿ. ಸಂಬಂಧಪಟ್ಟ ಪ್ರಾಧಿಕಾರಕ್ಕೆ ನಮ್ಮ ವಂಶದ ಮೂಲಪುರುಷರಿಗೆ ಸಂಬಂಧಪಟ್ಟಂತೆ ಯಾವುದೇ ದಾಖಲೆಯನ್ನು ವಂಶವೃಕ್ಷವನ್ನು ತಯಾರು ಮಾಡುವಾಗ ಕೊಟ್ಟಿಲ್ಲ ಎಂದರೆ ಸರಿ. ಸದರಿ ನಿಪಿ-11ನ್ನು ತಯಾರು ಮಾಡಿದ ನಂತರ ಅದು ಸರಿಯಾಗಿದೆ ಎಂದು ಯಾವುದೇ ಮಹಜರನ್ನು ಮಾಡಿ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದು ಅವರ ಸಹಿಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಿಪಿ-11ಕ್ಕೆ

ಸಾಕ್ಷಿದಾರರು ಸಹಿ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ನಿಪಿ-11ಕ್ಕೆ ಸಾಕ್ಷಿಯಾಗಿ ನಾರಾಯಣಪ್ಪ ಎಂಬುವವರು ಸಹಿ ಮಾಡಿರುತ್ತಾರೆ. ಸದರಿ ಸಾಕ್ಷಿದಾರರ ತಂದೆಯ ಹೆಸರು ಮತ್ತು ಅಂಚೆ ವಿಳಾಸ ನಮೂದು ಇರುವುದಿಲ್ಲ ಎಂದರೆ ಸರಿ.

ಸರಿಯಾದ ವಂಶವೃಕ್ಷವನ್ನು ಕೊಡದೆ ದಾವೆಗೋಸ್ಕರ ನಮಗೆ ಅನುಕೂಲವಾಗುವ ರೀತಿಯಲ್ಲಿ ವಂಶವೃಕ್ಷವನ್ನು ತಯಾರಿಸಲು ನಾವು ತಹಸಿಲ್ದಾರ್‌ರವರಿಗೆ ಮಾಹಿತಿಯನ್ನು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ನನ್ನ ವಾದಪತ್ರವು ದಾವೆಗೆ ಸಂಬಂಧಪಟ್ಟಂತೆ ಯಾವುದೇ ಸಂಪೂರ್ಣ ವಿವರಗಳನ್ನು (ಪಕ್ಷಗಾರರ ಸಂಬಂಧ ಹಾಗೂ ದಾವಾ ಆಸ್ತಿಯ ಸಂಬಂಧ) ಸರಿಯಾಗಿ ವಾದಪತ್ರದಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ.

**1 ರಿಂದ 6ನೇ ಪ್ರತಿವಾದಿಗಳ ಪರ ಶ್ರೀ ಜಿ.ಹೆಚ್ ವಕೀಲರು ಶ್ರೀ ಎನ್‌ಎನ್ ವಕೀಲರ ಪಾಟೀಸವಾಲನ್ನೇ ಅಳವಡಿಸಿಕೊಳ್ಳಲು ಅನುಮತಿ ಕೋರಿದ್ದು ಅನುಮತಿ ನೀಡಲಾಗಿದೆ.**

**ಮರು ವಿಚಾರಣೆ: ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)**

**ಓ ಹೇ ಕೇ ಸರಿ ಇದೆ.**

**(ಎ.ಸಿ.ದಯಾನಂದ ಮೂರ್ತಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಬಂಗಾರಪೇಟೆ.**